# ಕರ್ನಾಟಕ ಸರ್ಕಾರ

## ಕೃಷಿ ಇಲಾಖೆ

ಸಂ.SFS-5/ರಿಬಿವಿ/ಮಾ.ಸೂ/ಹಿಂಬೇ/2019-20

ಕೃಷಿ ಆಯುಕ್ತಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ 07-12-2019

## ಸುತ್ತೋಲೆ - 5

ವಿಷಯ:- 2019-20ರ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ವಿವಿಧ ಬಿತ್ತನೆ ಬೀಜ ವಿತರಿಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿಯ ಇದೇ ಸಮ ಸಂಖ್ಯೆಯ ಸುತ್ತೋಲೆಗಳು

2.ಕೆಓಎಫ್ ಸಂಸ್ಥೆಯ ಮನವಿ ಸಂಖ್ಯೆ: ಕೆಓಎಫ್/ವ್ಯನಿ/ಪಿಐ/ಆರ್.ಕೆ.ವಿ.ವೈ/2019-20/1709 ದಿನಾಂಕ:16.11.2019

3. ಶ್ರೀ ಸಾಯಿ ಆಗ್ರೋ ಸೀಡ್ಸ್ ರವರ ಮನವಿ ಪತ್ರ ದಿನಾಂಕ:18.11.2019

2019-20ರ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ಸಂಬಂಧಿಸಿದಂತೆ, ಉಲ್ಲೇಖ-1 ರಲ್ಲಿ ತಿಳಿಸಿರುವ ಸುತ್ತೋಲೆಗಳನ್ನು ಮುಂದುವರೆಸಿ ತಿಳಿಸುವುದೇನೆಂದರೆ, ಪ್ರಸ್ತುತ ಮಾರುಕಟ್ಟೆಯಲ್ಲಿ ನೆಲಗಡಲೆ ದರಗಳು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಉಲ್ಲೇಖ-2 ಮತ್ತು 3 ರಲ್ಲಿ ಕೆಓಎಫ್ ಮತ್ತು ಶ್ರೀ ಸಾಯಿ ಆಗ್ರೋ ಸೀಡ್ಸ್ ಸಂಸ್ಥೆಗಳ ಮನವಿಯಂತೆ ನೆಲಗಡಲೆಯ ವಿವಿಧ ತಳಿಗಳ ಬಿತ್ತನೆ ಬೀಜಗಳ ಅನುಮೋದಿತ ದರವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಅನುಮೋದನೆ ನೀಡಿದೆ.

(ದರ ಪ್ರತಿ ಕ್ವಿಂಟಾಲಿಗೆ ರೂ.ಗಳಲ್ಲಿ)

| ಬೆಳೆ | ತಳಿ | ವರ್ಗ | ಹಂತ | ಪ್ರಸ್ತುತ ಮಾರಾಟ ದರ | ಪರಿಷ್ಕೃತ ಮಾರಾಟ ದರ |
|---|---|---|---|---|---|
| ನೆಲಗಡಲೆ | K-6, GPBD-4 | ಕಾಳು | CS | 11900 | 10200 |
| ನೆಲಗಡಲೆ | K-6, GPBD-4 | ಕಾಳು | TL | 11700 | 10000 |
| ನೆಲಗಡಲೆ | TMV-2 | ಕಾಯಿ | TL | 8000 | 6800 |
| ನೆಲಗಡಲೆ | TMV-2 | ಕಾಳು | TL | 11500 | 9800 |
| ನೆಲಗಡಲೆ | GPBD-4 | ಕಾಯಿ | CS | 8100 | 6600 |
| ನೆಲಗಡಲೆ | G-2-52 | ಕಾಯಿ | CS | 8100 | 6900 |

**ವಿಶೇಷ ಸೂಚನೆ:**

2019-20ರ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಪ್ರಸ್ತುತ ನೀಡಲಾಗಿರುವ ಪರಿಷ್ಕೃತ ದರಗಳಲ್ಲಿ ವಿತರಣೆಗೆ ಕ್ರಮ ಕೈಗೊಳ್ಳುವುದು. ಮುಂದುವರೆದು. ಹಳೆ ದರದಲ್ಲಿ ವಿತರಿಸಿದ ನೆಲಗಡಲೆ ಮಾಹಿತಿಯನ್ನು ಕೂಡಲೇ Seed MIS ನಲ್ಲಿ ದಾಖಲಿಸಿ ಶೇ.100ರಷ್ಟು ದಾಖಲಾತಿ ಮುಗಿದ ನಂತ ಹೊಸ ದರಗಳಲ್ಲಿ ವಿತರಿಸಿದ ಪ್ರಮಾಣವನ್ನು ದಾಖಲಿಸುವುದು. ಯಾವುದೇ ಕಾರಣಕ್ಕೂ ಹಳೆ ದರದಲ್ಲಿ ವಿತರಿಸಿದ ಮಾಹಿತಿಯನ್ನು Seed MIS ನಲ್ಲಿ ದಾಖಲಿಸದೆ ಹೊಸ ದರಗಳಲ್ಲಿ ನೆಲಗಡಲೆ ಬೀಜಗಳನ್ನು ವಿತರಿಸುವಂತಿಲ್ಲ. ಒಂದು ವೇಳೆ ಹಳೆ ದರಗಳನ್ನು ದಾಖಲಿಸದೇ ಬಾಕಿ ಇಟ್ಟು ಹೊಸ ದರಗಳಲ್ಲಿ ವಿತರಿಸಿದ್ದೇ ಆದರೆ ಅಂತಹ ಪ್ರಮಾಣಕ್ಕೆ ಸರ್ಕಾರಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದಿಲ್ಲ ಹಾಗೂ ಇದಕ್ಕೆ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳ ಅಧಿಕಾರಿಗಳೇ ನೇರ ಹೊಣೆಗಾರರಾಗಿದ್ದು, ಅಂಥವರ ವಿರುದ್ಧ ಕ್ರಮ ಜರುಗಿಸಲಾಗುವುದು.

ದೈನಂದಿನ ಬಿತ್ತನೆ ಬೀಜದ ವಿತರಣೆ ಮಾಹಿತಿಯನ್ನು 12 ಗಂಟೆಗಳೊಳಗೆ Seed MIS ನಲ್ಲಿ ದಾಖಲಿಸಬೇಕು. ಇಲ್ಲವಾದಲ್ಲಿ ಅಂತಹ ಪ್ರಮಾಣಕ್ಕೆ ಸರ್ಕಾರಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದಿಲ್ಲ.

(ಟಿಪ್ಪಣಿ ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ನಿರ್ದೇಶಕರು

1. ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಪ್ರತಿಯನ್ನು ಸಂಬಂಧಪಟ್ಟ ಬೀಜ ಸರಬರಾಜುದಾರರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.